ಬಿಸಿಲ ನುಸಿದು ಬರೋ ಪ್ರಯತ್ನಕ್ಕೆ ಗುಮ್ ಅಂತ ಕವಿದುಕೊಂಡ ಮೋಡಗಳದ್ದೇ ಮೇಲುಗೈಯಾಗುತ್ತಿರುವ ಆಕಾಶದತ್ತ ಆತಂಕದಿಂದ ನೋಡುತ್ತ ಕೆಸರುರಾಡಿಯಾದ ಕಾಲ್ದಾರಿಯಿಂದ ಗದ್ದೆಗೆ ಹೋಗುವ ತಗ್ಗಿಗಿಳಿದುಕೊಂಡ ದೊಡ್ಡೀರ್ಯನ ಬೆರಳ ಸಂದುಗಳಲ್ಲಿ ಕೆಸರು ಪಿಚಿಪಿಚಿ ಉಕ್ಕುತ್ತಿದ್ದುದು ಸಾಲದೆ ಜಾರುವುದನ್ನೂ ಸಂಭಾಳಿಸಬೇಕಿತ್ತು. ಸೊಕ್ಕಿದ ಕಾಡೆಮ್ಮೆ ಮಲಗಿದಂತೆ ಕಾಣುವ ಯಮ್ಮೆಗುಡ್ಡ, ನಾಕುದಿನದಿಂದ ಹಿಡಿದ ಜಡಿಮಳೆ ಮೂಗುಹಿಡಿದು ಕುಡಿಸಿದ್ದಕ್ಕೆ ಸೋತು ಹೊಟ್ಟೆಯುಬ್ಬಿ ರಕ್ತ ಕಾರಿಕೊಂಡಂತಿರುವ ಕೆನ್ನೀರು ಕೆರೆಗಿನ್ನೂ ಹರಿದು ಬರುತ್ತಿತ್ತು. ಅವನ ಗದ್ದೆಯನ್ನು ಬಿಟ್ಟುಕೊಟ್ಟಿದ್ದರೂ ನೀರಿನ್ನೂ ಕ್ಯಾದಗೆಮಟ್ಟೆಯನ್ನು ಮೀರಿ ಆವರಿಸಿಕೊಂಡದ್ದಕ್ಕೆ ಸುತ್ತುಬಳಸಿ ಕಾನೊಳಗೆ ಹೊಕ್ಕು ಮರದಬೇರು ಹಿಡಿದುಕೊಂಡು ಗದ್ದೆಗಿಳಿದವನ ಹೆಗಲಮೇಲಿನ ಕಂಬಳಿ ಕೆಳಗೆ ಬೀಳುವುದರಲ್ಲಿತ್ತು. ಕಾಲಿಟ್ಟಲ್ಲಿ ಮೊಳಕಾಲಿಗೆ ಬರುವ ಕೆಸರಡಿಯಿಂದ ಬುಳುಬುಳು ಏಳುವ ನೀರುಗುಳ್ಳೆ. 'ಇನಾ ಯಾಲ್ಡು ದಿನಾನಾರ ಬೇಕು, ಇದ್ರವ್ವನ ಮಳಿ ಬರದಿದ್ರ ನೆಟ್ಟಿ ಹಚ್‌ಬಹುದು...' ಅಲವತ್ತುಕೊಳ್ಳುತ್ತ ಕೆರೆಯತ್ತ ನೋಡಿದ. ಈಗಲೂ ಒಡ್ಡಂಚಲ್ಲಿ ಗದ್ದೆಗೆ ಮಗುಚಿಕೊಳ್ಳುವ ಮಟ್ಟದಲ್ಲಿದ್ದ ನೀರು, ಕೆಳಗಿನವರ ಗದ್ದೆಬಯಲನ್ನು ಆವರಿಸಿಕೊಂಡು ಕೆರೆ ಯಾವುದು ಗದ್ದೆ ಯಾವುದು ಗೊತ್ತಾಗದಂತೆ ಕೂತಿತ್ತು.

ರೋಹಿಣಿ, ಮೃಗನ್ಮಳೆ ಯಾವದಾದ್ರು ನೆಲ ನೆನೆಸಿದರೆ ಬಿತ್ತುವುದೇ ರೂಢಿ. ಕೆರೆ ಕೆಳಗಿರೋದೆಲ್ಲ ದೀವರು, ಬ್ರಾಹ್ಮಣರು, ಹಳೆಪೈಕದವರು ಮೇಲ್ಜಾತಿಯವರ ಪಾರಂಪರ್ಯ ಭೂಮಿ. ಬಿತ್ತಲಾಗದಾಗ ನೆಟ್ಟಿ ಹಚ್ಚಿದರೂ ಮಳೆ ಕೈಕೊಟ್ಟರೆ ಕೆರೆನೀರು ಹರಿಸಿ ಬೆಳೆ ತೆಗೆಯೋ ಸವಲತ್ತಿತ್ತು. ತನ್ನದು ಕೆರೆ ಮೇಲಿನ ಜಮೀನು; ನೀರು ಹರಿಸುವಂಥದ್ದಲ್ಲ. ಒಂದಿನ ಯಾವೂರಿಂದೊ, ಹೇಗೆ ತಪ್ಪಿಸಿಕೊಂಡಿತ್ತೊ, ಬಡಕಲು ಹೋರಿಕರ; ಆರು ತಿಂಗಳದ್ದಿರಬಹುದು, ಇವನ ಹಿಂಡಿಗೆ ಸೇರಿ ಮನೆಗೆ ಬಂದಿತ್ತು. ಯಾರೂ ಹುಡುಕಿಕೊಂಡು ಬರಲಿಲ್ಲ. 'ನಮಗಾ ಜಾಗಿಲ್ಲ ಇಲ್ಲಿ, ಇದ್ನೊಂದು ತಂದ್ಯನು? ಹುಚ್ಚೇನು ನಿನಗ್?' ಅಂತ ಬಯ್ದರೂ ಕೇಳದೆ ಗುಡಿಸಲೆದುರು ಕಟ್ಟಿದ. ಉಪಾಧ್ಯರನ್ನ ಕಾಡಿಬೇಡಿ ತಿಂಗಳುಗಟ್ಲೆ ಅವರ ಕೆಲಸ ಮಾಡಿಕೊಟ್ಟು ಅವರದೊಂದು ಹೋರಿಕರ ತಂದು ಜೋಡಿಮಾಡಿ, ಹೆಗಲಿಗೆ ನೊಗ ಹೊರುವ ತರಬೇತು ನೀಡುವ ಗುದ್ದಾಟದಲ್ಲಿ ಬಿದ್ದು ಮೈಯೆಲ್ಲ ತರಚಿಕೊಳ್ಳುತ್ತ ಪಡುವ ಪಡಿಪಾಟಲು ಕೇರಿಯವರ ವ್ಯಂಗ್ಯಕ್ಕೆ ಕಾರಣವಾಗಿತ್ತು. ಮೇಲ್ಜಾತಿ ಕೇರಿಯವರ ಮನೆಬಾಗಿಲಿಗೆ ಹೋಗಿ ಚಾಲಗೇಣಿಗೆ ಒಂದೆರಡೆಕರೆ ಕೊಡಿ ಅಂತ ಬೇಡಿಕೊಂಡ. ಅನಿವಾರ್ಯವಾಗಿದ್ದ ಮುದುಕಿ ದೇವಕಮ್ಮನೋರು ಸಹ ಆರು ಚೀಲ ಗೇಣಿ ಕೊಡತೇನೆ ಅಂದರೂ ಇಲ್ಲ ಅಂದುಬಿಟ್ಟರು. ಅವರೆಲ್ಲರ ನಯವಾದ ಮಾತಿನ ಹಿಂದೆ ಯಾವುದೋ ಭಯವಿದೆ ಅನಿಸುತ್ತಿತ್ತು. ಆಮೇಲೆ ಹಳೆಪೈಕದ ಮಂಜಪ್ಪನಿಗೆ ನಾಕು ಚೀಲಕ್ಕೇ ಕೊಟ್ಟಿದ್ದು ಗೊತ್ತಾಗಿತ್ತು. ಯಮ್ಮೆಗುಡ್ಡದ ಹಿಂಭಾಗವನ್ನು ಅವನ ಕೇರಿಯವರು ಸ್ಮಶಾನವಾಗಿ ಬಳಸುತ್ತ ಬಂದಿದ್ದರು. ಅವನಿಗಾಗ ಇಪ್ಪತ್ತರ ಪ್ರಾಯ. ಯಲ್ಲಯ್ಯಜ್ಜ ಸತ್ತಾಗ ಕೇರಿಯಿಂದ ಎರಡು ಮೈಲು ದೂರ ಹೆಣ ಹೊತ್ತುತಂದಾಗ ಅವನೂ ಬಂದಿದ್ದ. ಕೆರೆ ಕೆಳಗೆ ಬಂಗಾರ ಸೂಡಿಕೊಂಡು ವಯ್ಯಾರದಲ್ಲಿರುವ ಗದ್ದೆ ಸರುವನ್ನು ನೋಡಿ ಪರವಶನಾಗಿದ್ದ. ಎರಡು ದಿನ ಹಿಂದೆ ಕಳ್ಳಬಿದ್ದ ಗೌಡರ ಹೋರಿ ದೆಸೆಯಿಂದ ಹೊಡೆತ ತಿಂದು, ದನಕಾಯೋ ಕೆಲಸ ಅಂದ್ರೆ ಹೇಸಿಗೆ ಅನಿಸಿಬಿಟ್ಟಿತ್ತು. ಮರುದಿನವೇ ಕತ್ತಿ ಪಿಕಾಸಿ ಹೊತ್ತು ಬಂದವ ದೆವ್ವಹಿಡಿದವನಂತೆ ಕೆಲಸಕ್ಕೆ ಬಿದ್ದಿದ್ದ. ಕುರುಚಲು ಮಟ್ಟಿ ಸವರಿ ಕಲ್ಲು ನೆಲ ಅಗೆದು ಕೇರಿಯವರು, 'ನೀರಿಲ್ಲ; ಕಾಡಂಚು, ಒಂದು ಕಾಳೂ ಕೈಗೆ ಹತ್ತೋದಿಲ್ಲ' ಅಂತ ಶಕುನ ಹೇಳಿದರೂ ಕೇಳಿರಲಿಲ್ಲ. ಆ ಕಡೆ ಸ್ಮಶಾನ; ಅದಕ್ಕೆ ತಾಗಿ